ದಿನಾಂಕ 09.01.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ನಾನು ವಾದಿ ಪರ ಸಾಕ್ಷಿದಾರನಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2. ನಿಪಿ-2 ಕರಾರು ಪತ್ರವನ್ನು ನಾನೇ ಡ್ರಾಫ್ಟ್ ಮಾಡಿರುತ್ತೇನೆ. ಅದರಲ್ಲಿ ನನ್ನ ಸಹಿಯನ್ನು ಈಗಾಗಲೇ ನಿಪಿ-2(ಓ) ಎಂದು ಗುರುತಿಸಲಾಗಿದೆ. ನಿಪಿ-2 ಕ್ಕೆ ವೀರಣ್ಣ ಪ್ರತಿ ಪುಟಗಳಲ್ಲಿ ಸಹಿ ಹಾಕಿದ್ದಾರೆ. ರುದ್ರೇಶ್ ಮತ್ತು ಉಷಾರವರು ಸಹ ಪ್ರತಿ ಪುಟಗಳಲ್ಲಿ ಸಹಿಗಳನ್ನು ಹಾಕಿರುತ್ತಾರೆ. ಅವುಗಳನ್ನು ನೋಡಿ ಗುರುತಿಸಿರುತ್ತೇನೆ. ನಿಪಿ-2 ಕ್ಕೆ ಸಾಕ್ಷಿದಾರರಾಗಿ ಶಿವಕುಮಾರ್ ಮತ್ತು ನರಸಪ್ಪರವರು ಸಹಿಗಳನ್ನು ಹಾಕಿರುತ್ತಾರೆ. ಅವುಗಳನ್ನು ನೋಡಿ ಗುರುತಿಸಿರುತ್ತೇನೆ.

ಪಾಟೀ ಸವಾಲುಃ-

ಪ್ರತಿವಾದಿಗಳ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಲೋಕೇಶ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.